


ರುದ್ರರಮಣೀಯ 'ಗಲ್ಫಾಸ್' ಜಲಪಾತ



'ಡೈಮಂಡ್ ಬೀಚ್' ತೀರದಲ್ಲಿ ವಜ್ರದ ತುಣುಕುಗಳಂತೆ ಗೋಚರಿಸುವ ಮಂಜುಗಡ್ಡೆಗಳು

ಮತ್ತೊಂದು ಆಕರ್ಷಕ ಕಡಲತೀರ, ಡೈಮಂಡ್ ಬೀಚ್. ವಿವಿಧ ಆಕಾರದ ಮಂಜುಗಡ್ಡೆಗಳಿಂದ ಕಂಗೊಳಿಸುವ ಇದು ಪ್ರವಾಸಿಗರು ನೋಡಲೇಬೇಕಾದ ತಾಣ. ಮಂಜುಗಡ್ಡೆಗಳು ವಜ್ರದಂತೆ ಕಂಗೊಳಿಸುವುದರಿಂದ ಈ ಕಡಲತೀರಕ್ಕೆ 'ಡೈಮಂಡ್ ಬೀಚ್' ಎಂಬ ಅನ್ವರ್ಥನಾಮ ಬಂದಿದೆ. ಈ ಕಡಲಿನಲ್ಲಿ ಅಲೆಗಳು ಭೀಕರವಾಗಿದ್ದು, ನಾವು ನೀರಿಗಿಳಿಯುವ ಸಾಹಸ ಮಾಡಲಿಲ್ಲ.

ರೈನ್ಸ್‌ಫರಾ ಬೀಚ್ ಸಮೀಪ ಇರುವ ಪ್ರಸಿದ್ಧ ಹಾಗೂ ಬಹಳ ವಿಸ್ತಾರವಾದ ಅಗ್ನಿಪರ್ವತವೆಂದರೆ, ಕಾಟ್ಲಾ. ಇದು ಐಸ್‌ಲ್ಯಾಂಡ್‌ನ ಅತಿ ದೊಡ್ಡ **Myrdalsjokull** ಎಂಬ ಹಿಮಗಡ್ಡೆಯ ಕೆಳಗಿದ್ದು, ಹಲವು ಬಾರಿ ಶಕ್ತಿಶಾಲಿ ಸ್ಫೋಟ ಸಂಭವಿಸಿದೆ. ಸಮುದ್ರ ತೀರದಲ್ಲಿ ನೀರಿನ ಸ್ಪರ್ಶವಾದಾಗ ಘನೀಕೃತಗೊಂಡ ಲಾವಾ, ಬಂಡೆಗಲ್ಲುಗಳಾದವೆಂದು ಹೇಳಲಾಗುತ್ತಿದೆ. ಇಬ್ಬರು ರಾಕ್ಷಸರು ಹಡಗನ್ನು ಆಕ್ರಮಿಸಿ ಮುಳುಗಿಸಲು ಪ್ರಯತ್ನಿಸಿದಾಗ, ಅವರು ಬಂಡೆಕಲ್ಲಾದರೆಂಬ ದಂತಕಥೆಯೂ ಪ್ರಚಲಿತದಲ್ಲಿದೆ. ಈ ಬಂಡೆಗಲ್ಲುಗಳು ಪ್ರವಾಸಿಗರ ಪ್ರಮುಖ ಆಕರ್ಷಣೆಯಾಗಿದ್ದು, ಈ ಶಿಲಾರಾಕ್ಷಸರ ಹತ್ತಿರ ನಿಂತು ಫೋಟೊ ತೆಗೆಸಿಕೊಳ್ಳುವುದು ಸಂಪ್ರದಾಯವಾಗಿಬಿಟ್ಟಿದೆ.

## ಹಿಮಗಾಳಿಯ ವೈಪರೀತ್ಯ

ಮೈ ನಡುಗಿಸುವಂಥ ಚಂಡಮಾರುತ ತೀವ್ರ ರೂಪದಲ್ಲಿ ಹಿಮದ ಬಿರುಗಾಳಿಯಾಗಿ ಪರಿವರ್ತನೆಯಾಗುವ ಭೀಕರ ಕೌತುಕವನ್ನು ಇಲ್ಲಿ ಪ್ರತ್ಯಕ್ಷವಾಗಿ ನೋಡಬಹುದು, ಗುಂಡಿಗೆ ಗಟ್ಟಿಯಿದ್ದರೆ ಅನುಭವಿಸಬಹುದು.

ಆರ್ಕ್ಟಿಕ್ ವಲಯದಲ್ಲಿ ಐಸ್‌ಲ್ಯಾಂಡ್ ಇರುವುದರಿಂದ ಹವಾಮಾನದಲ್ಲಿ ನಿರ್ದಿಷ್ಟತೆ ಇರುವುದಿಲ್ಲ. ಒಂದೇ ದಿನದಲ್ಲಿ ಎಲ್ಲಾ ಋತುಗಳ ಅನುಭವವೂ ಆಗಬಹುದು. ಇದೇ ಕಾರಣಕ್ಕೆ ಪ್ರವಾಸಿಗರಿಗೆ, 'ನಿಮಗೆ ಸದ್ಯದ ವಾತಾವರಣ ಹಿತಕರವಾಗಿಲ್ಲದಿದ್ದರೆ, ಕೇವಲ ಐದು ನಿಮಿಷ ಕಾಯಿರಿ' ಎಂಬ ಸಲಹೆ ಸಾಮಾನ್ಯ. ಪ್ರವಾಸಿಗರು ಹೊರಗೆ ಕಾಲಿಡುವ ಮುನ್ನ ಸೂಕ್ತ ವೆಬ್‌ಸೈಟ್ ಪರಿಶೀಲಿಸಿ ಹವಾಮಾನದ ಮುನ್ಸೂಚನೆ, ಎಚ್ಚರಿಕೆಯೊಂದಿಗೆ ಯಾವ ಸ್ಥಳ–ರಸ್ತೆ ಬಂದಾಗಿದೆ ಎಂಬ ಮಾಹಿತಿ ಪಡೆಯಬೇಕಾಗುತ್ತದೆ.

## ರೌರವ ಗಾಳಿಯ ಅನುಭವ

ಅಂದು ಉತ್ತರ ಐಸ್‌ಲ್ಯಾಂಡ್‌ವರೆಗೂ ಬಿರುಗಾಳಿ, ಮಳೆ ಎಚ್ಚರಿಕೆ ಇತ್ತು. ಕೆಫೆಯೊಂದರಲ್ಲಿ ಪಿಜ್ಜಾ ಸವಿಯುತ್ತಿರಬೇಕಾದರೆ ಭೀಕರತೆಯ ಮುಂಚಿನ ನಿಶ್ಶಬ್ದ ವಾತಾವರಣ ತುಂಬಿತ್ತು. ಸಮೀಪದಲ್ಲೇ ಇದ್ದ ನಮ್ಮ ವಸತಿ ತಲುಪಲು ಕಾರಿಗೆ ಹೋಗಲೆತ್ನಿಸಿದಾಗ ಬಿರುಗಾಳಿಯ ಪ್ರಚಂಡ ರೂಪ ಕಂಡೆವು. ನಿಂತಲ್ಲಿ ನಿಲ್ಲಲಾಗದೇ, ಕಾರಿನ ಬಳಿಯೂ ಹೋಗಲಾಗದೆ, ಬಹಳ ಕಷ್ಟದಿಂದ ಕಾರಿನ ಬಳಿ ತಲುಪಿ ಬಾಗಿಲು ತೆರೆಯಲೆತ್ನಿಸಿದಾಗ ಬಾಗಿಲೇ ಮುರಿದು ಬರುವಂತೆ ಭಾಸವಾಯಿತು. ಕಷ್ಟಪಟ್ಟು ಒಳಹೋಗಿ ಕುಳಿತರೆ, ಬಿರುಗಾಳಿಯ ರಭಸಕ್ಕೆ ಕಾರು ಅಲ್ಲಾಡುತ್ತಿದೆ! ಪ್ರಕೃತಿಯೊಂದಿಗೆ ಎಂದಿಗೂ ಹುಚ್ಚಾಟ ಆಡಬಾರದೆಂದು ಅರಿವಾದದ್ದು ಅಂದು.

ಜನವರಿಯಿಂದ ಏಪ್ರಿಲ್‌ವರೆಗೆ ಐಸ್‌ಲ್ಯಾಂಡ್ ಹಿಮದಿಂದ ಆವೃತವಾಗಿರುತ್ತದೆ. ಗಾಳಿಯ ಬಿರುಸು ಹೆಚ್ಚುತ್ತಾ ಹಿಮದ ಬಿರುಗಾಳಿಯಾಗಿ ಪರಿವರ್ತನೆಯಾಗುತ್ತದೆ. ದಟ್ಟವಾಗಿ ಆವರಿಸಿದ ಹಿಮದಿಂದಾಗಿ ಮುಂದಿನ ದಾರಿ ಸ್ಪಷ್ಟವಾಗಿ ಗೋಚರಿಸದೆ ಅಪಘಾತವಾಗುವ ಸಂಭವವಿರುತ್ತದೆ. ಪೂರ್ವ ಐಸ್‌ಲ್ಯಾಂಡ್‌ನಿಂದ ಉತ್ತರ ಐಸ್‌ಲ್ಯಾಂಡ್‌ನ ಅಕುರೇಯ್ರಿ ನಗರಕ್ಕೆ ಹೋಗುವಾಗ ಅಂದಾಜು 100 ಕಿ.ಮೀ.ಗಳ ದಾರಿ ಸಂಪೂರ್ಣ ಹಿಮದಿಂದ ಆವರಿಸಿಕೊಂಡಿದ್ದು, ನಾವು ಚಂದ್ರಲೋಕದಲ್ಲಿ ಸಂಚರಿಸುತ್ತಿದ್ದೇವೇನೋ ಎನಿಸಿತು.

## ನೀರ್ಗಲ್ಲುಗಳ ಅದ್ಭುತ ಲೋಕ

**Vatnajokull** ಎಂಬ ವಿಸ್ತಾರವಾದ ಗ್ಲೇಸಿಯರ್ ಈಗ 'ನ್ಯಾಷನಲ್ ಪಾರ್ಕ್' ಎಂದು ಘೋಷಿಸಲ್ಪಟ್ಟಿದೆ. ಇದರ ದಕ್ಷಿಣ ಭಾಗದ **Skaftafell** ಎಂಬ ಗ್ಲೇಸಿಯರ್‌ನಲ್ಲಿ ನಡೆದಾಡುವ ಅವಕಾಶವಿದೆ. ನೀರ್ಗಲ್ಲುಗಳ ಮೇಲೆ ನಡೆದಾಡಲು ನಮಗೆ ಅವಶ್ಯಕ ಸಲಕರಣೆ ನೀಡಲಾಗಿತ್ತು. ಸುಮಾರು ಒಂದು ಗಂಟೆಯ ಅವಧಿ ಚಂದ್ರನ ತುಂಡಿನ ಮೇಲೆ ನಡೆಯುತ್ತಿದ್ದೇವೆ ಎಂಬಂಥ ಅನುಭವವದು.

ಐಸ್ ಕೇವ್ (ICE CAVE) ಎಂಬ ನಿಸರ್ಗನಿರ್ಮಿತ ಹಿಮಗುಹೆ ಗ್ಲೇಸಿಯರ್ ಜಗತ್ತಿನಲ್ಲಿ ಕಾಣಸಿಗುವ ಪರಮಾದ್ಭುತ ತಾಣ. ನೀರ್ಗಲ್ಲಿನ ಹಿಮ ಕರಗಿ ನೀರಾಗಿ ಹರಿದು ಗ್ಲೇಸಿಯರ್ ಅಂಚಿನಲ್ಲಿ ದೊಡ್ಡ ಬಿಲ ಅಥವಾ ನೆಲಗವಿ ರಚಿಸುತ್ತದೆ. ಹಾಗಾಗಿ ಬೇಸಿಗೆ ಕಾಲದಲ್ಲಿ (ಹೆಚ್ಚೆಂದರೆ 20 ಡಿಗ್ರಿ) ಹಿಮ ಕರಗಿ ಹೋಗುವಾಗ ಐಸ್ ಕೇವ್ ಬಳಿ ಪ್ರವೇಶವಿರುವುದಿಲ್ಲ. ಈ ನೀರನ್ನು ಹಾಗೇ ಮಲಗಿ ಮುಖ ಕೊಟ್ಟು ಕುಡಿಯುವುದು ರೋಮಾಂಚನಕಾರಿ ಅನುಭವ.

ಪ್ರವಾಸಕ್ಕಾಗಿ ಐಸ್‌ಲ್ಯಾಂಡ್ ಆಯ್ಕೆ ಮಾಡುವಾಗ, 'ಅಲ್ಲೇನಿದೆ? ಹದಿನೈದು ದಿನಗಳೇಕೆ?' ಎಂಬೆಲ್ಲಾ ಪ್ರಶ್ನೆಗಳನ್ನೆದುರಿಸಿ ಬಂದಿದ್ದೆವು. ಈ ರಮ್ಯದ್ವೀಪ ಆ ಪ್ರಶ್ನೆಗಳಿಗೆ ಅನಿರ್ವಚನೀಯ ಅನುಭವದ ಉತ್ತರ ಕೊಟ್ಟಿತ್ತು. ಭೂಮಿ ಮೇಲಿನ ಈ ಮಾಯಾಲೋಕ ತನ್ನನ್ನರಸಿ ಬಂದವರಿಗೆ ಬೊಗಸೆ ತುಂಬಾ ಅಚ್ಚರಿಗಳನ್ನು ಕೊಟ್ಟು ಕಳುಹಿಸಿತ್ತು.

ಪ್ರತಿಕ್ರಿಯಿಸಿ: **feedback@sudha.co.in**